08/10/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ನಿಮ್ಮದು ಬುದ್ಧಿಯ ವಿದ್ಯೆಯಾಗಿದೆ, ಬುದ್ಧಿಯನ್ನು ಶುದ್ಧವನ್ನಾಗಿ ಮಾಡಿಕೊಳ್ಳಲು ಪ್ರವೃತ್ತಿಯಲ್ಲಿ ಬಹಳ ಯುಕ್ತಿಯಿಂದ ನಡೆದುಕೊಳ್ಳಬೇಕು, ತಿನ್ನುವುದು-ಕುಡಿಯುವುದರ ಪತ್ಯ ಇಟ್ಟುಕೊಳ್ಳಬೇಕು"

ಪ್ರಶ್ನೆ: ಈಶ್ವರನ ಕಾರೋಬಾರ ಬಹಳ ವಿಚಿತ್ರ ಹಾಗೂ ಗುಪ್ತವಾಗಿದೆ ಹೇಗೆ?

ಉತ್ತರ: ಪ್ರತಿಯೊಬ್ಬರ ಕರ್ಮದ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಸುವ ಕಾರೋಬಾರ ಬಹಳ ವಿಚಿತ್ರ ಹಾಗೂ ಗುಪ್ತವಾಗಿದೆ. ಯಾರು ಎಷ್ಟೇ ತಮ್ಮ ಪಾಪ ಕರ್ಮವನ್ನು ಮುಚ್ಚಿಡಲು ಪ್ರಯತ್ನ ಮಾಡಿದರೂ ಮುಚ್ಚಿಡಲು ಸಾಧ್ಯವಿಲ್ಲ. ಶಿಕ್ಷೆಯನ್ನು ಖಂಡಿತ ಭೋಗಿಸಬೇಕಾಗುತ್ತದೆ. ಪ್ರತಿಯೊಬ್ಬರ ಖಾತೆ ಮೇಲಿರುತ್ತದೆ, ಆದ್ದರಿಂದ ತಂದೆ ಹೇಳುತ್ತಾರೆ - ತಂದೆಯವರಾದ ನಂತರ ಯಾವುದಾದರು ಪಾಪ ಆಗಿದ್ದೇ ಆದರೆ ಸತ್ಯವನ್ನೇ ತಿಳಿಸುವುದರಿಂದ ಅರ್ಧ ಪಾಪ ಸಮಾಪ್ತಿ ಆಗಿಬಿಡುತ್ತದೆ. ಶಿಕ್ಷೆಗಳು ಕಡಿಮೆಯಾಗುತ್ತದೆ. ಮುಚ್ಚಿಡಬೇಡಿ. ಅಡಕೆ ಕದ್ದರೂ ಕಳ್ಳ ಆನೆ ಕದ್ದರೂ ಕಳ್ಳ ಎಂದು ಹೇಳಲಾಗುತ್ತದೆ. ಮುಚ್ಚಿಡುವುದರಿಂದ ಧಾರಣೆ ಆಗುವುದಿಲ್ಲ.

ಓಂ ಶಾಂತಿ. ಯಾರ ನೆನಪಿನಲ್ಲಿ ಕುಳಿತಿದ್ದೀರಿ? ಮಾತಾ-ಪಿತಾ ಬಾಪ್ದಾದಾರವರು ಈಗ ಬರುತ್ತಾರೆ, ಬಂದು ನಾವು ಮಕ್ಕಳಿಗೆ ಆಸ್ತಿಯನ್ನು ಕೊಡುತ್ತಾರೆ ಎಂದು ಮಕ್ಕಳು ತಿಳಿದುಕೊಂಡಿದ್ದೀರಿ. ತಂದೆಯಿಂದ ನಾವು ಪುನಃ 5000 ವರ್ಷದ ಹಿಂದಿನಂತೆ ಸ್ವರ್ಗದ ಆಸ್ತಿಯನ್ನು ಪಡೆದುಕೊಳ್ಳುತ್ತಿದ್ದೇವೆ. ಇದಂತೂ ಎಲ್ಲರ ಹೃದಯದಲ್ಲಿ ಇದೆಯಲ್ಲವೇ. ಈಗ ನರಕ ರೂಪಿ ಕಾಡಿಗೆ ಬೆಂಕಿ ಬೀಳುವುದಿದೆ. ನಿಮಗೆ ಈ ಪ್ರಪಂಚದವರೊಂದಿಗೆ ಯಾವುದೇ ಸಂಬಂಧವಿಲ್ಲ. ನಿಮ್ಮ ಜ್ಞಾನವು ಗುಪ್ತವಾಗಿದೆ, ಆಸ್ತಿಯೂ ಸಹ ಗುಪ್ತವಾಗಿದೆ. ಲೌಕಿಕ ತಂದೆಯ ಆಸ್ತಿಯಂತೂ ಪ್ರತ್ಯಕ್ಷವಾಗುತ್ತದೆ. ಇದು ತಂದೆಯ ಆಸ್ತಿಯಾಗಿದೆ. ಅದನ್ನು ಕಣ್ಣಿಂದ ನೋಡಬಹುದು. ತಂದೆಯನ್ನು ನೋಡಬಹುದು ಮತ್ತು ಆಸ್ತಿಯನ್ನೂ ಸಹ ನೋಡಬಹುದು. ಈಗ ನಮ್ಮ ಆತ್ಮನೂ ಸಹ ಗುಪ್ತವಾಗಿದೆ. ಈ ಕಣ್ಣಿಂದ ಆತ್ಮನನ್ನೂ ನೋಡಲು ಸಾಧ್ಯವಿಲ್ಲ, ಪರಮಾತ್ಮನನ್ನೂ ಸಹ ನೋಡಲು ಸಾಧ್ಯವಿಲ್ಲ. ಲೌಕಿಕ ಸಂಬಂಧದಲ್ಲಿ ತಮ್ಮನ್ನು ಶರೀರ ಎಂದು ತಿಳಿದು ಶರೀರವನ್ನೂ ಈ ಕಣ್ಣಿಂದ ನೋಡುತ್ತಾರೆ ಹಾಗೂ ಶರೀರ ಕೊಡುವಂತಹ ತಂದೆಯನ್ನೂ ಸಹ ನೋಡುತ್ತಾರೆ. ಟೀಚರ್, ಗುರುವನ್ನೂ ಸಹ ನೋಡುತ್ತಾರೆ, ಇಲ್ಲಾದರೆ ತಂದೆ, ಟೀಚರ್, ಗುರು ಎಲ್ಲರೂ ಗುಪ್ತವಾಗಿದ್ದಾರೆ. ಮಕ್ಕಳಿಗೆ ಗೊತ್ತಿದೆ ನಾವಾತ್ಮರಿಗೆ ಈಗ ಜ್ಞಾನದ ಮೂರನೆಯ ನೇತ್ರ ಸಿಕ್ಕಿದೆ. ಮುಂಚೆ ಮೂರನೇಯ ನೇತ್ರ ಇರಲಿಲ್ಲ. ಆತ್ಮ ಮಲಗಿಬಿಟ್ಟಿತು. ಈಗ ಆತ್ಮನನ್ನು ಜಾಗೃತ ಮಾಡಲಾಗುತ್ತದೆ ಅಂದಾಗ ಆತ್ಮವೂ ಸಹ ಗುಪ್ತವಾಗಿದೆ. ಹೇಗೆ ಆತ್ಮ ಬಂದು ಶರೀರದಲ್ಲಿ ಪ್ರವೇಶ ಮಾಡುತ್ತದೋ ಹಾಗೆಯೇ ಪರಮಾತ್ಮನೂ ಸಹ ಈ ಶರೀರದಲ್ಲಿ (ಬ್ರಹ್ಮಾರವರಲ್ಲಿ) ಬಂದು ನಮ್ಮನ್ನು ಮತ್ತೆ ಸ್ವರ್ಗಕ್ಕೆ ಮಾಲೀಕರನ್ನಾಗಿ ಮಾಡುತ್ತಿದ್ದಾರೆ. ಬುದ್ಧಿಯೂ ಸಹ ನಾವು ಅನೇಕಬಾರಿ ತಂದೆಯಿಂದ ಆಸ್ತಿಯನ್ನು ಅರ್ಧಕಲ್ಪಕ್ಕಾಗಿ ಪಡೆದುಕೊಂಡಿದ್ದೇವೆಂದು ಹೇಳುತ್ತದೆ. ಮತ್ತೆ ಅರ್ಧಕಲ್ಪ ಕಳೆದುಕೊಳ್ಳುತ್ತೇವೆ. ಈಗ ಪುನಃ ಶ್ರೀಮತದ ಆಧಾರದಮೇಲೆ ನಮ್ಮ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದೇವೆ. ಅವಶ್ಯವಾಗಿ ಆತ್ಮಾಭಿಮಾನಿ ಆಗಬೇಕಾಗಿದೆ. ಮೊದಲು ಆತ್ಮ ನಂತರ ಶರೀರ. ಆತ್ಮ ಅವಿನಾಶಿ, ತಂದೆಯೂ ಸಹ ಅವಿನಾಶಿಯಾಗಿದ್ದಾರೆ. ತಂದೆ ಯಾವ ಶರೀರದ ಆಧಾರ ಪಡೆದುಕೊಳ್ಳುತ್ತಾರೋ ಅದು ವಿನಾಶಿಯಾಗಿದೆ. ಈ ಶರೀರದಲ್ಲಿ ಬಂದು ಮಕ್ಕಳೇ-ಮಕ್ಕಳೇ ಎಂದು ಕರೆಯುತ್ತಾರೆ ಹಾಗೂ ನಾನು ಆತ್ಮನಾಗಿದ್ದೇನೆ, ದೈವೀ ಸತ್ಯಯುಗಿ ಸ್ವರಾಜ್ಯವನ್ನು ಪಡೆಯಲು ಪುರುಷಾರ್ಥ ಮಾಡಬೇಕೆಂದು ಸ್ಮೃತಿ ಕೊಡಿಸುತ್ತಾರೆ. ಪೂರ್ಣ ಪುರುಷಾರ್ಥ ಮಾಡಬೇಕಾಗಿದೆ. ಸತ್ಯಯುಗದಲ್ಲಿ ಕೇವಲ ನಿಮ್ಮ ರಾಜ್ಯವೇ ಇರುವುದು. ನೀವು ರಾಜ್ಯ ಮಾಡುತ್ತಿದ್ದಿರಿ. ಮತ್ತೆ ಪುನರ್ಜನ್ಮವಂತೂ ಪಡೆದುಕೊಳ್ಳಬೇಕಾಗುತ್ತದೆ. ಯಾರು ಶ್ರೀ ಕೃಷ್ಣ ವಂಶದವರು ಅಥವಾ ದೈವೀ ಕುಲದವರು ಆಗಿದ್ದರೋ ಅವರೇ ಪುನಃ ಬರುತ್ತಾರೆ. ಮತ್ತ್ಯಾರೂ ಇರುವುದಿಲ್ಲ. ಚಂದ್ರವಂಶಿ ಕುಲವೂ ಸಹ ಇರುವುದಿಲ್ಲ. ಇದು ಬಹಳ ಸಹಜ ಮಾತಾಗಿದೆ, ಸತ್ಯಯುಗದಲ್ಲಿ ಬೇರೆ ಯಾವುದೇ ಧರ್ಮ ಇರಲಿಲ್ಲ. ಈಗಂತೂ ಅನೇಕ ಧರ್ಮಗಳಿವೆ. ಪರಸ್ಪರ ಜಗಳ ಮಾಡುತ್ತಿರುತ್ತಾರೆ. ಸತ್ಯಯುಗದಲ್ಲಿ ಒಂದೇ ಧರ್ಮ ಇರುವ ಕಾರಣ ಯಾವುದೇ ಏರುಪೇರು ಇರುವುದಿಲ್ಲ. ಅಂದಾಗ ತಾವು ಮಕ್ಕಳು ಗುಪ್ತವಾಗಿ ತಮ್ಮ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದೀರಿ. ಪ್ರತಿಯೊಬ್ಬರು ನಮ್ಮ ರಾಜಧಾನಿಯಲ್ಲಿ ಶ್ರೇಷ್ಠ ಪದವಿಯನ್ನು ಪಡೆಯಲು ಪುರುಷಾರ್ಥ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಅಂದಮೇಲೆ ಅಂತಹ ಧೈರ್ಯವೂ ಸಹ ಬೇಕಾಗಿದೆ. ತಮ್ಮ ಹೆಸರೇ ಶಿವಶಕ್ತಿಯಾಗಿದೆ. ಹುಲಿಯಮೇಲೆ ಯಾವುದೇ ಸವಾರಿ ಇರುವುದಿಲ್ಲ, ಕೇವಲ ಮಹಿಮೆಯನ್ನು ತೋರಿಸಿದ್ದಾರೆ. ಆದ್ದರಿಂದ ಶಕ್ತಿಯರನ್ನು ಹುಲಿಯ ಮೇಲೆ ಕೂರಿಸುತ್ತಾರೆ. ನೀವು ಯಾವುದೇ ಹುಲಿಯ ಮೇಲೆ ಕುಳಿತುಕೊಳ್ಳುವುದಿಲ್ಲ. ತಾವಂತೂ ಮಾಯೆಯ ಮೇಲೆ ವಿಜಯವನ್ನು ಪಡೆದುಕೊಳ್ಳುವವರಾಗಿದ್ದೀರಿ. ಇಂತಹ ಶಕ್ತಿಯನ್ನು ತೋರಿಸುತ್ತೀರಿ ಆ ಕಾರಣ ಶಿವಶಕ್ತಿ ಸೇನೆ ಎಂದು ಹೆಸರು ಇಡಲಾಗಿದೆ. ತಮ್ಮಲ್ಲಿ ಅಣ್ಣಂದಿರೂ ಸಹ ಇದ್ದಾರೆ ಆದರೆ ಹೆಚ್ಚಾಗಿ ಮಾತೆಯರು ಇದ್ದಾರೆ. ನೀವು ಅಪವಿತ್ರ ಪ್ರವೃತ್ತಿ ಮಾರ್ಗದಿಂದ ಪವಿತ್ರ ಪ್ರವೃತ್ತಿ ಮಾರ್ಗದಲ್ಲಿ ಕರೆದುಕೊಂಡು ಹೋಗುತ್ತೀರಿ. ತಮಗೆ ಗೊತ್ತಿದೆ ಸತ್ಯಯುಗಿ ವಿಷ್ಣುಪುರಿಯಲ್ಲಿ ಬಹಳ ಸುಖವಿತ್ತು, ಪವಿತ್ರತೆ, ಸುಖ, ಶಾಂತಿ ಎಲ್ಲವೂ ಇತ್ತು. ಇಲ್ಲಾದರೆ ಎಷ್ಟು ದುಃಖವಿದೆ. ಮನೆಯಲ್ಲಿ ಮಕ್ಕಳು ಕುಪುತ್ರರಾದರೆ ಎಷ್ಟು

ತೊಂದರೆ ಕೊಡುತ್ತಾರೆ. ಅಲ್ಲಾದರೆ ಸದಾ ಹರ್ಷಿತವಾಗಿರುತ್ತಾರೆ. ನಿಮಗೆ ಗೊತ್ತಿದೆ ಬೇಹದ್ದಿನ ತಂದೆ ಪುನಃ ಬೇಹದ್ದಿನ ಆಸ್ತಿಯನ್ನು ಕೊಡಲು ಬಂದಿದ್ದಾರೆ. ತಂದೆಯು ಹೇಳುತ್ತಾರೆ - ಭಲೆ ಗೃಹಸ್ಥ ವ್ಯವಹಾರದಲ್ಲಿ ಇರಿ ಆದರೆ ಬುದ್ಧಿಯಲ್ಲಿ ಜ್ಞಾನವನ್ನು ಧಾರಣೆ ಮಾಡಿ, ಈ ವಿದ್ಯೆ ಬುದ್ಧಿಯಿಂದ ಓದುವುದಾಗಿದೆ. ಮನೆಯಲ್ಲಿ ಇರುತ್ತಾ ಶ್ರೀಮತದಮೇಲೆ ನಡೆಯಬೇಕು. ತಿನ್ನುವುದು-ಕುಡಿಯುವುದರಿಂದಲೂ ಸಹ ಪ್ರಭಾವ ಬೀಳುತ್ತದೆ. ಆದ್ದರಿಂದ ಯುಕ್ತಿಯಿಂದ ನಡೆದುಕೊಳ್ಳಬೇಕು. ಪ್ರತಿಯೊಬ್ಬರ ಕರ್ಮ ಬಂಧನ ತಮ್ಮ-ತಮ್ಮದಾಗಿರುತ್ತದೆ. ಕೆಲವರು ಬಂಧನದಲ್ಲಿ ಇರುತ್ತಾರೆ, ಕೆಲವರು ಬಂಧನಮುಕ್ತರಾಗಿರುತ್ತಾರೆ. ಕೆಲವರು ಬುದ್ಧಿವಂತಿಕೆಯಿಂದ ಚಮತ್ಕಾರ ಮಾಡಿ ಬಂಧನದಿಂದ ಬಿಡುಗಡೆ ಆಗಿಬಿಡುತ್ತಾರೆ. ಯುಕ್ತಿಗಳಂತೂ ಬಹಳ ತಿಳಿಸಲಾಗಿದೆ. ಅವರಿಗೆ ಪವಿತ್ರವಾಗಿರಿ ಎನ್ನುವುದು ತಂದೆಯ ಆಜ್ಞೆಯಾಗಿದೆ ಎಂದು ತಿಳಿಸಬೇಕು, ನಾನು ಭಕ್ತಿಯ ಫಲವನ್ನು ಕೊಡಲು ಬಂದಿದ್ದೇನೆ ಎಂದು ತಂದೆಯು ಹೇಳುತ್ತಾರೆ. ಅಂದಾಗ ಅವಶ್ಯವಾಗಿ ತಂದೆಯ ಮತದಮೇಲೆ ನಡೆಯಬೇಕಾಗಿದೆ, ಆಗಷ್ಟೇ ಶಿಕ್ಷೆ ವಿನಃ ನಾವು ಮುಕ್ತಿ-ಜೀವನ್ಮುಕ್ತಿಯನ್ನು ಪಡೆದುಕೊಳ್ಳುತ್ತೇವೆ. ಜನ್ಮ-ಜನ್ಮಾಂತರದ ಹೊರೆ ತಲೆ ಮೇಲಿದೆ. ಹೇಗೆ ತಂದೆ ಒಂದು ಸೆಕೆಂಡಿನಲ್ಲಿ ಮುಕ್ತಿ-ಜೀವನ್ಮುಕ್ತಿಯನ್ನು ಕೊಡುತ್ತಾರೋ ಹಾಗೆಯೇ ಶಿಕ್ಷೆಯೂ ಸಹ ಒಂದು ಸೆಕೆಂಡಿನಲ್ಲಿ ಸಿಕ್ಕಿಬಿಡುತ್ತದೆ, ಆದರೆ ಬಹಳ ಭೋಗಿಸಬೇಕಾಗುತ್ತದೆ. ಹೇಗೆ ಕಾಶಿಯಲ್ಲಿ ಶಿಕ್ಷೆಯನ್ನು ಭೋಗಿಸುತ್ತಾರೋ ಅದು ಸ್ವಲ್ಪ ಸಮಯಕ್ಕಾಗಿ ಬಹಳ ಶಿಕ್ಷೆಯನ್ನು ಅನುಭವಿಸುತ್ತಾರೆ, ಆದರೆ ಲೆಕ್ಕಾಚಾರ ಸಮಾಪ್ತಿ ಆಗಿಬಿಡುತ್ತದೆ. ನಾವಂತೂ ಶಿಕ್ಷೆ ವಿನಃ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಕೊಳ್ಳಬೇಕು ಆದ್ದರಿಂದ ಶಿಕ್ಷೆಯಿಂದ ಬಿಡುಗಡೆ ಆಗುವಂತಹ ಪುರುಷಾರ್ಥವನ್ನು ಮಾಡಬೇಕು. ತಂದೆಯನ್ನು ನೆನಪು ಮಾಡುವುದು ಒಳ್ಳೆಯದು. ವಿನಾಶವೂ ಸಹ ಎದುರಿನಲ್ಲಿ ನಿಂತಿದೆ. ವಿನಾಶಕಾಲದಲ್ಲಿ ಪಾಂಡವರದು ಪ್ರೀತಿ ಬುದ್ಧಿ ಆಗಿರುತ್ತದೆ. ತಂದೆ ಸಮ್ಮುಖದಲ್ಲಿ ಬಂದು ಪ್ರೀತಿಯನ್ನು ಇರಿಸಿಕೊಂಡಿದ್ದಾರೆ. ಬಾಕಿ ಅನ್ಯರಜೊತೆ ಪ್ರೀತಿಯನ್ನು ಇಟ್ಟುಕೊಂಡು ಏನು ಮಾಡುತ್ತೀರಿ? ಅದೆಲ್ಲವೂ ಸಹ ಸಮಾಪ್ತಿಯಾಗುವುದಿದೆ. ಒಬ್ಬ ತಂದೆಯನ್ನು ನೆನಪು ಮಾಡುವ ತೀವ್ರ ಪುರುಷಾರ್ಥ ಮಾಡಬೇಕು. ಬಾಹ್ಯವಾಗಿ ಮಿತ-ಸಂಬಂಧಿಕರನ್ನು ಕುಶಲ ಸಮಾಚಾರವನ್ನು ಕೇಳಲಾಗುತ್ತದೆ ಆದರೆ ಆಂತರಿಕವಾಗಿ ಹೃದಯ ಒಬ್ಬ ತಂದೆಯ ಜೊತೆ ಇರಬೇಕು. ಶಾರೀರಕ ಪ್ರಿಯತಮೆಯರು ಮನೆಯಲ್ಲಿ ಇರುತ್ತಾ ಒಬ್ಬರಿಗೊಬ್ಬರು ನೆನಪು ಮಾಡುತ್ತಿರುತ್ತಾರೆ. ತಾವು ಶಿವಬಾಬನಿಗೆ ಪ್ರಿಯತಮೆಯರಾಗಿದ್ದೀರಿ. ಅವರು ತಮ್ಮ ಸನ್ಮುಖದಲ್ಲಿ ಇದ್ದಾರೆ. ಶಿವಬಾಬಾ ನಿಮ್ಮನ್ನು ನೆನಪು ಮಾಡುತ್ತಾರೆ, ನೀವು ಅವರನ್ನು ನೆನಪು ಮಾಡಿ. ಶಿವತಂದೆ ಇವರ ಶರೀರದಲ್ಲಿ ಬಂದು ಆತ್ಮರ ವಿವಾಹವನ್ನು ತಮ್ಮೊಂದಿಗೆ ಮಾಡಿಕೊಳ್ಳುತ್ತಾರೆ. ಇದಕ್ಕೆ ಆತ್ಮ ಮತ್ತು ಪರಮಾತ್ಮರ ಜೊತೆಗಿನ ಕಲ್ಯಾಣಕಾರಿ ಮಿಲನವೆಂದು ಹೇಳಲಾಗುತ್ತದೆ. ನೀವು ಜ್ಞಾನಗಂಗೆಯರಾಗಿದ್ದೀರಿ. ಜ್ಞಾನಸಾಗರ ತಂದೆ ಒಬ್ಬರೇ ಆಗಿದ್ದಾರೆ. ತಂದೆಯನ್ನು ನೆನಪು ಮಾಡುವುದರಿಂದ ವಿಕರ್ಮ ವಿನಾಶವಾಗುತ್ತದೆ. ತಂದೆ ಮತ್ತೆ ಯಾವ ಕಷ್ಟವನ್ನು ಕೊಡುವುದಿಲ್ಲ. ಕೇವಲ ಪವಿತ್ರವಾಗಿರಬೇಕೆಂದು ಹೇಳುತ್ತಾರೆ. ಕಾಮ ಮಹಾಶತ್ರು ಆಗಿದೆ. ಇದರ ಜಯವನ್ನು ಗಳಿಸುವುದರಿಂದ ಕೃಷ್ಣಪುರಿಗೆ ಮಾಲೀಕರಾಗುತ್ತೀರಿ. ತಂದೆಯ ಆದೇಶವಾಗಿದೆ ಪವಿತ್ರರಾಗಿದ್ದೇ ಆದರೆ 21 ಜನ್ಮದ ರಾಜ್ಯಭಾಗ್ಯವನ್ನು ಪಡೆಯುತ್ತೀರಿ. ಪತಿತರಾಗುವ ಬದಲು ಪಾತ್ರೆಯನ್ನು ತೊಳೆದುಕೊಂಡಿರುವುದೇ ಒಳ್ಳೆಯದು. ಆದರೆ ದೇಹಾಭಿಮಾನ ಬಿಡದೆ ಇರುವ ಕಾರಣ ಆಸ್ತಿಯನ್ನೂ ಸಹ ಕಳೆದುಕೊಳ್ಳುತ್ತಾರೆ. ನೋಡಿ ತಂದೆ ಎಷ್ಟು ಶ್ರೇಷ್ಠರಾಗಿದ್ದಾರೆ, ಪತಿತ ಪ್ರಪಂಚದಲ್ಲಿ ಪತಿತ ಶರೀರದಲ್ಲಿ ಬಂದಿದ್ದಾರೆ. ಶಿವತಂದೆಯನ್ನು ಸೋಮನಾಥ ಮಂದಿರದಲ್ಲಿ ಪೂಜಿಸುತ್ತಿದ್ದಾರೆ. ಅಂತಹ ತಂದೆ ನೋಡಿ ಈಗ ಎಷ್ಟು ಸಾಧಾರಣವಾಗಿ ಕುಳಿತಿದ್ದಾರೆ. ಈಗ ಪರಮಾತ್ಮ ಸ್ವಯಂ ಶಿಕ್ಷೆ ಕೊಡುತ್ತಿದ್ದಾರೆ, ಇದರ ಮೇಲೆ ನಡೆದುಕೊಂಡಿಲ್ಲವೆಂದರೆ ಪದವಿಗೆ ಗೆರೆ ಹಾಕಿಕೊಳ್ಳುತ್ತೀರಿ.

ತಂದೆ ಹೇಳುತ್ತಾರೆ - ಪವಿತ್ರರಾಗಿ. ಈಗ ಎಲ್ಲರೂ ಭ್ರಷ್ಟಾಚಾರಿ ಆಗಿದ್ದಾರೆ, ಯಾರು ಪವಿತ್ರವಾಗಿರುತ್ತಾರೋ ಅವರಿಗೆ ಶ್ರೇಷ್ಠಾಚಾರಿ ಎಂದು ಕರೆಯಲಾಗುತ್ತದೆ. ಎಲ್ಲರನ್ನು ಶ್ರೇಷ್ಠಚಾರಿಗಳನ್ನಾಗಿ ಮಾಡಿ ಎಂದು ಸರ್ಕಾರವು ಸನ್ಯಾಸಿಗಳ ಗ್ರೂಪ್ ಮಾಡಿದೆ. ಆದರೆ ಶ್ರೇಷ್ಠಾಚಾರಿಗಳು ಇರುವುದೇ ಸತ್ಯಯುಗದಲ್ಲಿ. ಇಲ್ಲಿ ಇರಲು ಸಾಧ್ಯವಿಲ್ಲ. ಪವಿತ್ರರಿಗೆ ಶ್ರೇಷ್ಠರೆಂದು ಕರೆಯಲಾಗುತ್ತದೆ. ಸನ್ಯಾಸಿಗಳು ಪವಿತ್ರವಾಗಿದ್ದಾರೆ ಆದರೆ ಅವರ ಜನ್ಮ ಅಪವಿತ್ರತೆಯಿಂದ ತೆಗೆದುಕೊಳ್ಳುತ್ತಾರೆ ಏಕೆಂದರೆ ಮಾಯೆಯ ರಾಜ್ಯವಾಗಿರುವುದರಿಂದ ಯಾರೂ ಯೋಗಬಲದಿಂದ ಜನ್ಮವನ್ನು ತೆಗೆದುಕೊಳ್ಳುವುದಿಲ್ಲ. ನಿಮ್ಮ ಹೃದಯ ಯಾವಾಗಲೂ ಸ್ವಚ್ಛವಾಗಿರಬೇಕೆಂದು ತಂದೆ ಮಕ್ಕಳಿಗೆ ತಿಳಿಸುತ್ತಾರೆ. ಸ್ವಲ್ಪವೂ ಅಹಂಕಾರ ಇರಬಾರದು. ಸಂಪೂರ್ಣ ಬಡವರಾಗಿರುವುದು ಒಳ್ಳೆಯದು. ತಂದೆ ಬಡವರ ಬಂಧು. ವಾಹ್! ಬಡವರೇ ವಾಹ್! ಬಡವರನ್ನು ಸಾಹುಕಾರರನ್ನಾಗಿ ಮಾಡಬೇಕಾಗಿದೆ. ತಂದೆಯು ಹೇಳುತ್ತಾರೆ - ಭಾರತವನ್ನು ಬಡವರಿಂದ ಸಾಹುಕಾರರನ್ನಾಗಿ ಮಾಡುತ್ತೇನೆ. ಭಾರತವಾಸಿಗಳೇ ಆಗುತ್ತಾರೆ. ಯಾರು ಶ್ರೀಮತದಂತೆ ನಡೆಯುತ್ತಾರೋ ಅವರೇ ಆಗುತ್ತಾರೆ. ಅವರೇ ಸ್ವರ್ಗಕ್ಕೆ ಮಾಲೀಕರಾಗಲು ಸಾಧ್ಯ. ಕೃಷ್ಣಪುರಿ ಅಥವಾ ಸ್ವರ್ಗದ ಮಾಲೀಕರಾಗಲು ತಂದೆ ಸಹಜರಾಜಯೋಗವನ್ನು ಕಲಿಸುತ್ತಾರೆ. ತಂದೆ ಆದೇಶವಾಗಿದೆ ಪವಿತ್ರರಾಗಿ. ಮನುಷ್ಯರನ್ನು ನಾವು ಗುರುಗಳೆಂದು ಒಪ್ಪುವುದಿಲ್ಲ. ಪವಿತ್ರತೆಯ ಮೇಲೆ ಬಹಳ ಜಗಳಗಳು ಆಗುತ್ತದೆ. ಕೆಲವರಿಗೆ ಹೊಡೆತಗಳು ಬೀಳುತ್ತವೆ, ಮನೆಯಿಂದ ಹೊರಗಡೆ ಹಾಕುತ್ತಾರೆ ಅಂದಾಗ ಅವರು ಏನು ಮಾಡುತ್ತಾರೆ? ಅಂತಹವರಿಗೆ ತಂದೆ ತನ್ನ ಬಳಿ ಆಶ್ರಯ ಕೊಡುತ್ತಾರೆ. ಆದರೆ ತಂದೆಯ ಬಳಿ ಬಂದು ಸಂಬಂಧಿಗಳನ್ನು ನೆನಪು ಮಾಡಿದ್ದೆ ಆದರೆ ಬಹಳ ನಷ್ಟ ಮಾಡಿಕೊಳ್ಳುತ್ತಾರೆ. ನಂತರ ಎರಡು ಕಡೆಯಿಂದ ಹೊರ ಹೋಗುತ್ತಾರೆ. ಯಾರಿಗೆ ಜ್ಞಾನದ ಧಾರಣೆ ಆಗುವುದಿಲ್ಲ ಅವರು ಸುಧಾರಣೆ ಹೊಂದುವುದಿಲ್ಲ. ಹಳೆಯ ನಡೆತೆಯನ್ನೇ ನಡೆಯುತ್ತಿರುತ್ತಾರೆ. ಇಲ್ಲಿ ಯಾವುದೇ ಪಾಪವನ್ನು ಮಾಡಬಾರದು. ನೀವು

ಪುಣ್ಯಾತ್ಮರಾಗಬೇಕಾಗಿದೆ. ಶ್ರೀಮತದ ಆಧಾರದ ಮೇಲೆ ತಮ್ಮೊಂದಿಗೆ ತಾವೇ ಕೇಳಿಕೊಳ್ಳಿ ಇದು ಪಾಪವೋ ಅಥವಾ ಪುಣ್ಯವೋ ಎಂದು. ತಂದೆ ತಿಳಿಸುತ್ತಾರೆ - ಏನೆಲ್ಲಾ ಪಾಪ ಮಾಡಿದಿರೋ ಅದನ್ನು ತಂದೆಗೆ ತಿಳಿಸುವುದರಿಂದ ಅರ್ಧ ಪಾಪ ಅಳಿಸಿಹೋಗುತ್ತದೆ. ಅನೇಕ ಮಕ್ಕಳು ನಾವು ಈ ರೀತಿ ಮಾಡಿದೆವು ಎಂದು ಹೇಳುತ್ತಾರೆ. ಇಂತಹವರಿಂದ ನಾವು ಪತಿತರಾದೆವು ಎಂದು ಹೇಳುತ್ತಾರೆ. ತಂದೆಗೆ ಇವರು ಎಷ್ಟು ವಿಕರ್ಮ ಮಾಡಿದ್ದಾರೆಂದು ತಿಳಿಯುತ್ತದೆ. ಯಾವುದೇ ಪಾಪವನ್ನು ಮಾಡಬೇಡಿ ಎಂದು ಹೇಳುತ್ತಾರೆ. ಇಲ್ಲವೆಂದರೆ ಧರ್ಮರಾಜಪುರಿಯಲ್ಲಿ ಸಾಕ್ಷಾತ್ಕಾರ ಮಾಡಿಸಿ ಒಂದಕ್ಕೆ 100 ಪಟ್ಟು ಶಿಕ್ಷೆಯಾಗುತ್ತದೆ. ನೀವು ಇಂತಿಂತಹ ಪಾಪವನ್ನು ಮಾಡಿ ಮುಚ್ಚಿಡುತ್ತಿದ್ದೀರಿ, ಆದರೆ ಮುಚ್ಚಿಡಲು ಸಾಧ್ಯವಿಲ್ಲ. ತಂದೆಗಂತೂ ಚೆನ್ನಾಗಿ ತಿಳಿಯುತ್ತದೆ. ಧರ್ಮರಾಜನ ಬಳಿ ಎಲ್ಲಾ ಖಾತೆ ಇರುತ್ತದೆ. ಈಶ್ವರೀಯ ಕಾರೋಬಾರ್ ಬಹಳ ಅದ್ಭುತವಾದದ್ದು ಮತ್ತು ಗುಪ್ತವಾದದ್ದು. ಇವರು ಅವಶ್ಯವಾಗಿ ಪಾಪ ಮಾಡಿದ್ದಾರೆ, ಆದ್ದರಿಂದ ತುಂಬಾ ಕೆಟ್ಟ ಮನೆಯಲ್ಲಿ ಜನ್ಮ ಸಿಗುತ್ತದೆ ಎಂದು ಹೇಳುತ್ತಾರಲ್ಲವೇ. ಮೇಲೆ ಖಾತೆಯಂತೂ ಇದೆ ಅದರಲ್ಲಿ ಎಲ್ಲವು ಜಮಾ ಆಗುತ್ತಿರುತ್ತದೆ. ಈಗ ಖಾತೆ ಇಲ್ಲೇ ಇರುವುದರಿಂದ ತಂದೆ ತಿಳಿಸುತ್ತಿರುತ್ತಾರೆ - ಮಕ್ಕಳೇ ಈಗ ಯಾವುದೇ ಪಾಪವನ್ನು ಮಾಡಬೇಡಿ. ಅಡಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ ಎಂದು ಕರೆಯಲಾಗುತ್ತದೆ. ನಾವು ಬಹಳ ದೊಡ್ಡ ಪಾಪವನ್ನು ಮಾಡುತ್ತಿದ್ದೇವೆ ನಂತರ ಪದವಿ ಭ್ರಷ್ಟರಾಗುತ್ತೇವೆ ಎಂಬುದನ್ನು ತಿಳಿದುಕೊಳ್ಳಬೇಕು. ಧಾರಣೆ ಆಗಲಿಲ್ಲವೆಂದರೆ ಈಶ್ವರೀಯ ಸೇವೆಯನ್ನು ಮಾಡಲು ಸಾಧ್ಯವಿಲ್ಲ. ಅನ್ಯರಿಗೂ ಕಲ್ಯಾಣ ಮಾಡಬೇಕಾಗಿದೆ. ಸಮಯವನ್ನು ಹಾಳುಮಾಡಿ ಪಾಪವನ್ನು ಮಾಡುತ್ತಿದ್ದರೆ ಪದವಿ ಭ್ರಷ್ಟರಾಗಬೇಕಾಗುತ್ತದೆ. ನಂತರ ಕಲ್ಪ-ಕಲ್ಪಾಂತರಕ್ಕಾಗಿ ಅದೇ ಪದವಿ ಸಿಗುತ್ತದೆ. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಪುರುಷಾರ್ಥ ಮಾಡಿ. ತಂದೆಯ ಬಳಿ ಏಕೆ ಬಂದಿದ್ದೀರಿ ಎಂದು ಕೇಳಲಾಗುತ್ತದೆ. ಅದಕ್ಕೆ ಸೂರ್ಯವಂಶದ ರಾಜಧಾನಿಯ ಆಸ್ತಿಯನ್ನು ಪಡೆಯಲು ಬಂದಿದ್ದೇವೆ ಎಂದು ಹೇಳುತ್ತಾರೆ. ಅಂದಾಗ ಶ್ರೀಮತದ ಮೇಲೆ ನಡೆಯಬೇಕಲ್ಲವೇ. ತನ್ನನ್ನು ತಾನು ನೋಡಿಕೊಳ್ಳಬೇಕು ನನ್ನಿಂದ ಯಾವುದೇ ಕೆಟ್ಟಕರ್ಮ, ಪಾಪಕರ್ಮ ಆಗುತ್ತಿಲ್ಲವೇ ಇಲ್ಲವೆಂದರೆ 100 ಪಟ್ಟು ದಂಡ ತೆರಬೇಕಾಗುತ್ತದೆ. ನಂತರ ದಾಸ-ದಾಸಿಯರು ಆಗಬೇಕಾಗುತ್ತದೆ. ಅದಕ್ಕೋಸ್ಕರ ಇಲ್ಲಿಗೆ ಬಂದಿರುವುದೇ. ಮಮ್ಮಾ-ಬಾಬಾ ಎಂದು ಹೇಳುತ್ತೀರೆಂದರೆ ನರನಿಂದ ನಾರಾಯಣರಾಗಬೇಕಲ್ಲವೇ. ಧಾರಣೆ ಇಲ್ಲದೆ ಪದವಿ ಹೇಗೆ ಸಿಗುತ್ತದೆ? ಮಮ್ಮಾ-ಬಾಬಾ ಎಂದು ಹೇಳಿದರೂ ತಂದೆಯ ಸಿಂಹಾಸನದಲ್ಲಿ ಕುಳಿತುಕೊಳ್ಳಲಿಲ್ಲವೆಂದರೆ ಇವರು ಸರಿಯಾಗಿ ಓದಲಿಲ್ಲವೆಂದು ತಿಳಿಯುತ್ತದೆ. ಮಮ್ಮಾ-ಬಾಬಾರವರು ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮಿ ಆಗುತ್ತಾರಲ್ಲವೇ. ನಿಮಗೂ ಸಹ ತಂದೆ ಓದಿಸುತ್ತಾರಲ್ಲವೇ ಅಂದಾಗ ತಂದೆಯಿಂದ ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳಬೇಕು. ಅನೇಕರು ಒಳಗೂ ಪಾಪವನ್ನು ಮಾಡುತ್ತಿರುತ್ತಾರೆ, ಹೇಳುವುದೇ ಇಲ್ಲ. ಎಷ್ಟು ಹೇಳಿದರೂ ಅದನ್ನು ಬಿಡುವುದೇ ಇಲ್ಲ. ಕಳ್ಳತನದ ಅಭ್ಯಾಸವಾಯಿತೆಂದರೆ ಕಳ್ಳತನ ಮಾಡದೆ ಸುಳ್ಳು ಹೇಳದೆ ಇರಲು ಸಾಧ್ಯವಾಗುವುದಿಲ್ಲ. ಸತ್ಯ ತಂದೆಯ ಜೊತೆ ಸತ್ಯವನ್ನೇ ಹೇಳಬೇಕು. ತಂದೆಗೆ ನಮ್ಮಿಂದ ಈ ರೀತಿಯ ಪಾಪ ಆಗಿದೆ ಕ್ಷಮೆ ಮಾಡಿ ಎಂದು ಕೇಳಿಕೊಳ್ಳಬೇಕು. ಮಾಯೆ ಪಾಪವನ್ನು ಮಾಡಿಸಿಬಿಟ್ಟಿದೆ. ಆದರೂ ಸತ್ಯವನ್ನು ಹೇಳಿದ್ದೇ ಆದರೆ ಅರ್ಧ ಪಾಪವನ್ನು ಕ್ಷಮಿಸಲು ಸಾಧ್ಯವಿದೆ. ಇಲ್ಲವೆಂದರೆ ಪಾಪವು ವೃದ್ಧಿ ಆಗುತ್ತಾ ಇರುತ್ತದೆ. ಕೆಲವರು ವ್ಯಾಪಾರದಲ್ಲಿ ಪಾಪವಾಗುತ್ತದೆ ಎಂದು ಹೇಳುತ್ತಾರೆ. ವ್ಯಾಪಾರಸ್ಥರು ಪಾಪವನ್ನು ಮಾಡುತ್ತಾರೆ, ಆ ಪಾಪ ಕಡಿಮೆ ಆಗಲಿ ಎಂದು ದಾನ ಮಾಡಲು ಹಣ ತೆಗೆಯುತ್ತಾರೆ. ಪಾಪವನ್ನು ಮಾಡಿ ಪುಣ್ಯದಲ್ಲಿ ಹಣವನ್ನು ತೊಡಗಿಸುವುದೂ ಸಹ ಒಳ್ಳೆಯದಾಗಿದೆ. ಈ ತಂದೆ ಸ್ವರ್ಗದ ಸ್ಥಾಪನೆ ಮಾಡುತ್ತಾರೆ ಎಂದಾಗ ಎಲ್ಲವು ಪುಣ್ಯದಲ್ಲಿ ಹೊರಟು ಹೋಗುತ್ತದೆ. ದಾನ-ಪುಣ್ಯ ಮಾಡುವಂತಹವರಿಗಂತೂ ಫಲ ಸಿಗುತ್ತದಲ್ಲವೇ. ತಂದೆಯು ಪ್ರತಿಯೊಬ್ಬರಿಗೂ ತಿಳಿಸುತ್ತಾರೆ, ಮತವನ್ನು ಕೊಡುತ್ತಾರೆಂದರೆ ಮಕ್ಕಳು ಎಂದೂ ಸಹ ಇಂತಹ ಕರ್ಮವನ್ನು ಮಾಡಬಾರದು ಆದರೆ ಮಾಯೆ ಬಿಡುವುದಿಲ್ಲ. ಒಳ್ಳೊಳ್ಳೆ ವಸ್ತುವನ್ನು ನೋಡಿದರೆಂದರೆ ತಕ್ಷಣ ತಿಂದುಬಿಡುತ್ತಾರೆ ಇಲ್ಲವೆಂದರೆ ಬಚ್ಚಿಟ್ಟುಕೊಳ್ಳುತ್ತಾರೆ. ಇಂತಹ ಪಾಪಕರ್ಮವನ್ನು ಮಾಡುವುದರಿಂದ ತನ್ನದೇ ಪದವಿಯನ್ನು ಭ್ರಷ್ಟ ಮಾಡಿಕೊಳ್ಳುತ್ತಾರೆ. ಕೆಲವು ಮಕ್ಕಳು ತಂದೆ-ತಂದೆ ಎಂದು ಹೇಳಿ ನಂತರ ಕೈ ಬಿಟ್ಟು ಹೋಗುತ್ತಾರೆ. ಕೈ ಬಿಟ್ಟರೆಂದರೆ ಯಾವ ಸ್ಥಿತಿ ಬರುತ್ತದೆ. ಮಾಯೆ ಏಕ್ದಂ ತಿಂದುಬಿಡುತ್ತದೆ ನಂತರ ಅವರು ಕಾಸಿಗೂ ಬೆಲೆ ಇಲ್ಲದವರಾಗಿ ನಿರ್ಗತಿಕರಾಗುತ್ತಾರೆ. ನಂಬರ್ವಾರ್ ಅಂತೂ ಇರುತ್ತಾರಲ್ಲವೇ. ಸುಖಧಾಮದಲ್ಲಿ ಕೆಲವರು ರಾಜ್ಯ ಮಾಡುತ್ತಾರೆ, ಕೆಲವರು ಸಾಧಾರಣವಾಗಿಯೇ ಇರುತ್ತಾರೆ. ದಾಸ-ದಾಸಿಯರೂ ಸಹ ಇರುತ್ತಾರಲ್ಲವೇ. ಈಗ ನೀವು ಮಕ್ಕಳಿಗೆ ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿ ಸಿಗುತ್ತದೆ. ಆದ್ದರಿಂದ ತಂದೆಯ ಶ್ರೀಮತದ ಮೇಲೆ ನಡೆದು ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳಿ. ಮೃತ್ಯುವಂತೂ ಎದುರಿನಲ್ಲಿ ನಿಂತಿದೆ. ಅಕಾಲ ಮೃತ್ಯುವಂತೂ ಸಂಭವಿಸುತ್ತಿರುತ್ತದೆ. ವಿಮಾನ ಕೆಳಗೆ ಬಿದ್ದರೆ ಎಲ್ಲರೂ ಸತ್ತು ಹೋಗುತ್ತಾರೆ. ಈ ರೀತಿ ಆಗುತ್ತದೆ ಎಂದು ಯಾರಿಗಾದರೂ ತಿಳಿಯುತ್ತದೆಯೇ. ಮೃತ್ಯು ತಲೆಯ ಮೇಲೆ ನಿಂತಿದೆ ಆದ್ದರಿಂದ ಪ್ರಯತ್ನ ಮಾಡಿ ತಂದೆಯಿಂದ ಸಂಪೂರ್ಣ ಆಸ್ತಿಯನ್ನು ತೆಗೆದುಕೊಳ್ಳಬೇಕು. ಶ್ರೀಮತದಮೇಲೆ ಶರೀರ ನಿರ್ವಾಹಾರ್ಥ ಕರ್ಮವನ್ನು ಮಾಡಿ ಜೊತೆ-ಜೊತೆಗೆ ಈ ಓದನ್ನೂ ಸಹ ಓದಿ. ತಂದೆ ಯುಕ್ತಿಗಳನ್ನಂತೂ ತಿಳಿಸುತ್ತಾರೆ. ಪುರುಷಾರ್ಥ ಮಾಡಿ ಪವಿತ್ರರಾಗಬೇಕು. ಅಪವಿತ್ರರಾಗುವ ಬದಲು ಕಸಗುಡಿಸುವುದು, ಪಾತ್ರೆ ತೊಳೆಯುವುದೇ ಒಳ್ಳೆಯದು. ಆದರೆ ಆತ್ಮಾಭಿಮಾನಿಗಳು ಆಗಬೇಕಾಗುತ್ತದೆ. ಪವಿತ್ರತೆಗೆ ಮಾನ್ಯತೆಯಂತೂ ಇದೆಯಲ್ಲವೇ. ಪವಿತ್ರರಾಗಲಿಲ್ಲವೆಂದರೆ ಪದವಿಯನ್ನು ಪಡೆಯುವುದಿಲ್ಲ. ಈ ಎಲ್ಲಾ ತಿಳುವಳಿಕೆಯನ್ನು ಮಕ್ಕಳಿಗೆ ಕೊಡಲಾಗುತ್ತದೆ. ಮಕ್ಕಳು ವೃದ್ಧಿಯನ್ನು ಹೊಂದುತ್ತಾ ಇರುತ್ತಾರೆ. ಬಹಳಷ್ಟು ಪ್ರಜೆಗಳು ಆಗುವವರಿದ್ದಾರೆ. ಒಬ್ಬ ರಾಜನಿಗೆ ಸಾವಿರಾರು ಪ್ರಜೆಗಳು ಇರಬೇಕಲ್ಲವೇ. ರಾಜಾ ಆಗುವುದರಲ್ಲಿ ಪರಿಶ್ರಮವಿದೆ.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ವಿನಾಶದಕಾಲದಲ್ಲಿ ಹೃದಯದ ಪ್ರೀತಿ ಒಬ್ಬ ತಂದೆಯ ಮೇಲೆ ಇರಬೇಕು, ಒಬ್ಬರದೇ ನೆನಪಿನಲ್ಲಿ ಇರಬೇಕು.

2. ಸತ್ಯ ತಂದೆಯಜೊತೆ ಸದಾ ಸತ್ಯವಾಗಿರಬೇಕು. ಏನನ್ನೂ ಮುಚ್ಚಿಡಬಾರದು. ಆತ್ಮಾಭಿಮಾನಿ ಆಗುವ ಪರಿಶ್ರಮ ಪಡಬೇಕು. ಎಂದೂ ಅಪವಿತ್ರರಾಗಬಾರದು.

ವರದಾನ: ದುಃಖದ ಅಲೆಗಳಿಂದ ನ್ಯಾರಾ ಆಗಿ ಪ್ರಭು ಪ್ರೀತಿಯ ಅನುಭವ ಮಾಡುವಂತಹ ಖುಷಿಯ ಖಜಾನೆಯಿಂದ ಸಂಪನ್ನ ಭವ

ಸಂಗಮದ ಸಮಯ ದುಃಖದ ಅಲೆಗಳ ಎಷ್ಟೋ ಮಾತುಗಳು ಎದುರಿಗೆ ಬರುವುದು ಆದರೆ ನಿಮ್ಮೊಳಗೆ ಆ ದುಃಖದ ಅಲೆ ದುಃಖಿಗಳನ್ನಾಗಿ ಮಾಡಬಾರದು. ಹೇಗೆ ಬೇಸಿಗೆಯ ಸಮಯದಲ್ಲಿ ಬಿಸಿಯಾಗುವುದು ಆದರೆ ಸ್ವಯಂ ಅದರಿಂದ ರಕ್ಷಿಸಿಕೊಳ್ಳುವುದು ನಿಮ್ಮ ಮೇಲಿದೆ. ಆದ್ದರಿಂದ ದುಃಖದ ಮಾತು ಕೇಳುತ್ತಿದ್ದರೂ ಸಹ ಮನಸ್ಸಿನ ಮೇಲೆ ಅದರ ಪ್ರಭಾವ ಬೀಳಬಾರದು. ಯಾವಾಗ ಇಂತಹ ದುಃಖದ ಅಲೆಯಿಂದ ನ್ಯಾರಾ ಆಗುವಿರಿ ಆಗ ಪ್ರಭುವಿನ ಪ್ಯಾರಾ ಆಗುವಿರಿ. ಯಾರು ಈ ರೀತಿ ನ್ಯಾರೆ ಮತ್ತು ಪರಮಾತ್ಮ ಪ್ಯಾರೆ ಆಗಿದ್ದಾರೆ ಅವರೇ ಖುಷಿಯ ಖಜಾನೆಯಿಂದ ಸಂಪನ್ನರಾಗಿರುತ್ತಾರೆ.

ಸ್ಲೋಗನ್: ತ್ರಿಕಾಲದರ್ಶಿ ಹಾಗೂ ತ್ರಿನೇತ್ರಿ ಯಾರೆಂದರೆ ಯಾರು ಮಾಯೆಯ ಬಹುರೂಪಗಳನ್ನು ಸಹಜವಾಗಿ ಕಂಡುಹಿಡಿದುಬಿಡುತ್ತಾರೆ ಅವರು.